ಯೋಹಾನಸ್ ಗುಟನಬರ್ಗನ (1400 -1468) ಮೊದಲ ಮುದ್ರಣ ಯಂತ್ರ





ಕೊನೆಯಲ್ಲಿ ಯೋಹಾನಸ್ ನ ಬಾಲ್ಯದಲ್ಲಿಯ ಸ್ವಪ್ನ ನಿಜವಾಯಿತು. 1456ರಲ್ಲಿ ಫಾಸ್ಟ್ ನ ಮದ್ರಣಾಲಯದಲ್ಲಿಯ ತನ್ನದೇ ಯಂತ್ರದ ಮೇಲೆ ಕೆಲಸ ಮಾಡುವ ಚಾಕರಿ ಮಾಡಬೇಕಾಯಿತು. ಅಲ್ಲಿಯೇ ಆತನು ಬಾಯಬಲ್ಲಿನ ಮೊದಲನೆ ಮುದ್ರಿತ ಪ್ರತಿಯನ್ನು ತಯಾರಿಸಿದನು. ಪಾದ್ರಿಗಳಿಗೆ ಬಾಯಬಲ್ಲಿ ಒಂದು ಪ್ರತಿ ತಯಾರಿಸಲು 30 ವರುಷಗಳು ಬೇಕಾಗುತ್ತಿದ್ದವು. ಆದರೆ ಗುಟನ್ಬರ್ಗ್ ನು ಒಂದೇ ವರುಷದಲ್ಲಿ ಬಾಯಬಲ್ಲಿನ 300 ಪ್ರತಿಗಳನ್ನು ಮುದ್ರಿಸಿದನು. 1500ರಲ್ಲಿ ಇಡೀ ಯುರೋಪಿನ ತುಂಬ ಮುದ್ರಣ ಯಂತ್ರಗಳಿದ್ದ ಮುದ್ರಣಾಲಯಗಳು ಹಬ್ಬಿದವು. 30000 ಪುಸ್ತಕಗಳನ್ನು ಮುದ್ರಿಸಲಾಯಿತು. ಇವನಿಂದಾಗಿಯೇ ಜ್ಞಾನದ ಪ್ರಕಾಶವು ಎಲ್ಲ ದಿಕ್ಕುಗಳನ್ನು ಬೆಳಗತೊಡಗಿತು.